(iii) Re: *Strike by the Field Assistants and the Agricultural Assistants of Agriculture Department.*

Sri M. H. JAYAPRAKASH NARAYAN (Sirsi).—I call the attention of the Minister for Agriculture and Animal Husbandry to the hunger strike by the Field Assistants and Agricultural Assistants of Agriculture Department.

Sri N. CHIKKE GOWDA (Minser for Agriculture and Animal Husbandry.—Madam Speaker I wish to make the following statement:—

The representation of the Mysore Field Assistants and Agricultural Assistants Association has been carefully examined by Government. The main contention of the Association is that the three scales of pay presently existing in respect of three categories of posts be amalgamated and they be given one uniform scale of pay of Rs. 130—290 and a common seniority list be prepared in that combined cadre.

The three categories of posts in this cadre and the scales of pay presently existing are shown in the following table:—

TABLE

Sl. No.	Designaeion of the posts	No. of posts	Qualification prescribed for recruitment to the posts.	Present scale of pay
				Rs
1	Field Assistants	3,270	SSLC Training in Agriculture/Soil Conservation	100-220
2	Fieldmen	400	VII Standard Training in Agriculture.	100-220
3	Gramasevaks	3,690	SSLC Training in GTC. by Government.	120-240

The cadre of Fieldmen with a total strength of 400 is gradually getting extinct as recruitment to this category of posts is not made now. This will leave us with only two categories of posts namely Field Assistant and Gramasevaks. While the Field Assistants get training in Agriculture or Soil Conservation only the Gramasevaks get training in the G.T.Cs. in the activities of the different Departments of Government. The period of training of Gramasevaks is also longer than the period of training prescribed for Field Assistants. It is with this background that higher scale of pay has been sanctioned for Gramasevaks.

(SRI N. CHIKKE GOWDA)

The cadre of Field Assistants was created prior to the cadre of Gramasevaks. In other words, most of the Field Assistants are seniors to the Gramasevaks. If a combined cadre is made, most of the Gramasevaks will lose promotional opportunities and on promotions the Field Assistants will have been placed in charge of taluks. It has to be recalled that the recommendations of the National Commission on Agriculture are in favour of appointing only graduates in agriculture at the Taluka level. The technology has been so advanced in agriculture and the need for interpreting the research done to the agriculturists is so pressing that if the agriculturists are to be benefited by advancement in modern technology, it will be absolutely necessary that the staff working at the Taluka level should be fully qualified. If a combined cadre is conceded, the Taluka level officers in most of the cases will be drafted only from the category of Field Assistants and because of their limited training and limited specialisation they cannot be expected to deliver the goods. I take this opportunity to clarify that the work under the Seed Certification Act and the Fertilizers Act to be done at the Taluka level is required to be done under the statute only by gratuate assistants. If Fieldmen by virtue of their rank in the combined seniority list are ultimately to be placed in charge of Talukas, the statutory work required to be done under the aforesaid Acts will have to be done by some other authority. This will involve avoidable expenditure and avoidable work also.

Apart from these administrative difficulties, the financial position of the State does not permit any revision of scale of pay at present. The next Pay Commission is expected to be appointed shortly and the question of revision of scales of pay of all categories of posts will be entrusted to this Body. The Association will have then ample opportunities to place their view points before the Commission and argue out their case. Even if as an urgent measure the requests of the Association are to be placed before the Official Pay Committee, it will take some time before the Committee makes its recommendations and as all of you know, these recommendations cannot be outside the context of the State's financial position. I would not, therefore, be at present in a position to concede any of the requests of the Association. I would appeal to the Members to persuade the persons who have gone on Hunger-strike at the cost of their duty to give up such agitational attitude and report themselves for duty and contribute to the national wealth by helping the agriculturists in their respective jurisdictions.

I need hardly say that it is high time that we appoint highly competent and technically qualified officers at the Taluka and other levels *specially* in view of the rapid advances made in the farm technology.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು, ಈ ಸಮಸ್ಯೆಯನ್ನು ಮುಂದಿನ ಪೇ ಕಮಿಷನ್ ಮುಂದೆ ಇಡುವುದಾಗಿ ಹೇಳಿದ್ದಾರೆ. ಇದನ್ನು ಕೂಡಲೇ ಮಾಡಿಸಿ, ಪರಿಶೀಲನೆ ಮಾಡಿಸತಕ್ಕದ್ದು ಒಂದು ಪ್ರಶ್ನೆ. ಎರಡನೆಯದಾಗಿ, ಫೀಲ್ಡ್ ಅಸಿಸ್ಟೆಂಟ್ಸ್ ಮತ್ತು ಅಗ್ರಿಕಲ್ಚರ್ ಅಸಿಸ್ಟೆಂಟ್ ವೃತ್ತಿ ಮತ್ತು ಅವರ ಕ್ವಾಲಿಫಿಕೇಷನ್ ಒಂದೇ ಆಗಿರುವುದರಿಂದ, ಇವರು ಸಾಯಿಲ್ ಕನ್ಸರ್ವೇಷನ್ ಟ್ರೈನಿಂಗ್ ಮಾತ್ರ ತೆಗೆದುಕೊಂಡಿದ್ದಾರೆ, ಜಿ. ಟಿ ಸಿ. ತೆಗೆದುಕೊಂಡಿರುವವರು ದೊಡ್ಡವರು, ಬಾಕಿಯವರು ಚಿಕ್ಕವರು ಎನ್ನತಕ್ಕ ತಾರತಮ್ಯ ತೋರಿಸದೆ ಇವರಿಬ್ಬರಿಗೂ ಒಂದೇ ತರಹದ, ಟ್ರೈನಿಂಗ್ ಕೊಟ್ಟು ಒಂದೇ ತರಹದ ಸಂಬಳವನ್ನು ಕೊಟ್ಟು ಇವರ ಸ್ಕೇಲನ್ನು ಒಂದೇ ಮಾಡುವುದಕ್ಕೆ ಪೇ ಕಮೀಷನ್‌ಗೆ ಸೂಚನೆ ಕೊಡುತ್ತೀರಾ ? ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಅವರು ಇದನ್ನು ಪರಿಶೀಲನೆ ಮಾಡಿ, ಇವೆರಡನ್ನು ಒಂದೇ ಮಾಡಬೇಕು ಎಂದು ಶಿಫಾರಸ್ ಕೂಡ ಕೊಟ್ಟಿದ್ದಾರೆ. ಇದನ್ನು ಪರಿಶೀಲನೆ ಮಾಡಿಸಿ, ಮಾನ್ಯ ಮಂತ್ರಿಗಳು ಇವರಿಬ್ಬರ ಸಂಬಳಗಳನ್ನು ಒಂದು ಮಾಡುತ್ತೀರಾ ? ಈ ಹಿಂದೆ ಇದರ ಬಗ್ಗೆ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಇವೆಲ್ಲದರ ಹಿನ್ನೆಲೆಯಲ್ಲಿ, ತಾವು ದಯವಿಟ್ಟು ಇವರ ವಿಷಯವನ್ನು ವಿಚಾರ ಮಾಡಬೇಕು. ಫೀಲ್ಡ್ ಅಸಿಸ್ಟೆಂಟ್ಸ್ ಬಹಳ ಶ್ರಮ ಜೀವಿಗಳಾಗಿದ್ದಾರೆ ; ಬಿಸಿಲಿನಲ್ಲಿ ಕೆಲಸ ಮಾಡುತ್ತಾರೆ, ರಾಜ್ಯದ ಮತ್ತು ರಾಷ್ಟ್ರದ ರೈತರ ಉದ್ಧಾರಕ್ಕಾಗಿ ಮತ್ತು ಮಾಡರ್ನ್ ಅಗ್ರಿಕಲ್ಚರ್ ಟೆಕ್ನಿಕ್‌ಗೂ ಸಹ ಇವರು ಸಹಾಯಕರಾಗಿದ್ದಾರೆ. ಇವರ ಸಂಬಳಗಳನ್ನು ಒಂದು ಮಾಡುವುದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ?

ಅಧ್ಯಕ್ಷರು.—ಮಾನ್ಯ ಸದಸ್ಯರು ವಿವರಣೆ ಕೇಳುತ್ತಿದ್ದಾರೆಯೇ ಅಥವಾ ಭಾಷಣ ಮಾಡುತ್ತಿದ್ದಾರೆಯೇ ? ಇದನ್ನು ಯಾರಾದರೂ ಕ್ಲಾರಿಫಿಕೇಷನ್ ಎಂದು ಹೇಳುತ್ತಾರೆಯೇ ?

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ನನ್ನ ಅಭಿಪ್ರಾಯವಾದರೂ ಇಷ್ಟೆ, ಇವರಿಬ್ಬರ ಸ್ಕೇಲನ್ನು ಒಂದು ಮಾಡುವುದಕ್ಕೆ ಮುಂದಿನ ಪೇ ಕಮಿಷನ ನವರಿಗೆ ಸೂಚನೆ ಕೊಡುತ್ತೀರಾ ? 2. ಇದರಿಂದ ಬಡ್ಜೆಟ್ಟಿನಲ್ಲಿ ಎಷ್ಟು ಹಣವನ್ನು ಒದಗಿಸಬೇಕಾಗುತ್ತದೆ, ಇವರಿಬ್ಬರದು ಒಂದೇ ಕ್ವಾಲಿಫಿಕೇಷನ್ ಒಂದೇ ತರಹದ ವೃತ್ತಿ ಇರುವುದರಿಂದ, ಇಬ್ಬರಿಗೂ ಸಮಾನತೆಯನ್ನು ದೊರಕಿಸಿಕೊಡುವ ಅವಕಾಶವನ್ನು ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದ ಹಾಗೆ, ವ್ಯವಸಾಯದಲ್ಲಿ ಪರಿಶೋಧನೆಯ ಫಲವಾಗಿ, ಅಗ್ರಿಕಲ್ಚರಲ್ ಫಾರ್ಮ್ ಟೆಕ್ನಿಕ್ ಅಡ್ವಾನ್ಸ್ ಈ ಫೀಲ್ಡ್‌ಮನ್ ಎನ್ನತಕ್ಕವರು ಏಳನೆಯ ಸ್ಟಾಂಡರ್ಡ್‌ನವರೆಗೆ ಮಾತ್ರ ಓದಿರುತ್ತಾರೆ, ಇವರಿಗೆ ಟ್ರೈನಿಂಗ್ ಕೊಟ್ಟಿರುವುದು ಕೇವಲ ಆರು ತಿಂಗಳು ಮಾತ್ರ. ಈಗಾಗಲೇ 400 ಜನ ಫೀಲ್ಡ್‌ಮನ್ ಇದ್ದಾರೆ. ಇದರಲ್ಲಿ ಕೆಲವರು ಎಸ್ ಎಸ್ ಎಲ್ ಸಿ, ಆಗಿರುವವರು ಮತ್ತು ಕೆಲವರು ಎಸ್ ಎಸ್ ಎಲ್ ಸಿ. ಆಗದೆ ಇರುವವರು ಇದ್ದಾರೆ. ಇವರಿಬ್ಬರಿಗೂ ಟ್ರೈನಿಂಗ್ ಕೊಟ್ಟಿರತಕ್ಕದ್ದು ಆರು ತಿಂಗಳು ಮಾತ್ರ. ಈ ಫೀಲ್ಡ್‌ಮನ್ ಮತ್ತು ಫೀಲ್ಡ್ ಅಸಿಸ್ಟೆಂಟ್ಸ್ ಹುದ್ದೆಗಳನ್ನು ಅಮಾಲ್ಗಮೇಟ್ ಮಾಡತಕ್ಕದ್ದು ಇದೆ. ಇವರಿಗೆ ಕೊಟ್ಟಿರತಕ್ಕ ಟ್ರೈನಿಂಗ್ 6 ತಿಂಗಳು, ಆದರೆ ಗ್ರಾಮಸೇವಕರುಗಳಿಗೆ ಕೊಟ್ಟಿರತಕ್ಕದ್ದು ಎರಡು ವರ್ಷದ ಕೋರ್ಸಿನ ಟ್ರೈನಿಂಗ್. ಆದ್ದರಿಂದ ಈ ಫೀಲ್ಡ್‌ಮನ್ ಮತ್ತು ಫೀಲ್ಡ್ ಅಸಿಸ್ಟೆಂಟ್ಸ್ ಹುದ್ದೆಗಳನ್ನು ಅಮಾಲ್ಗಮೇಟ್ ಮಾಡಿದರೆ, ಇವರಿಗೆ ಪ್ರಮೋಷನಲ್ ಅಪರ್ಚ್ಯುನಿಟೀಸ್ ಬರುತ್ತದೆ. ಈ ರೀತಿಯಾದರೆ ನಾನೆಯ ದಿವಸ ಇವರು ಎ ಇ ಒ ಆಗಬಹುದು, ಇನ್ನೂ ಪ್ರಮೋಷನ್ ಬಂದರೆ, ಗೆಜೆಟೆಡ್ ಆಫೀಸರ್ ಅಸಿಸ್ಟೆಂಟ್ ಡೈರೆಕ್ಟರ್ ಆಗಬಹುದು. ಇವತ್ತು ಬಿ ಎಸ್ ಸಿ ಎಜ್ರಿ ಮಾಡಿಕೊಂಡು ಎ ಇ ಒ ಆದವರಿಗೂ ಅನೇಕ ವಿಷಯಗಳು ಮಾಹಿತಿ ಇರುವುದಿಲ್ಲ, ಅಡ್ವಾನ್ಸ್‌ಮೆಂಟ್ ಆಫ್ ಫಾರಂ ಟೆಕ್ನಾಲಜಿ ಆದವೇಲೆ, ಎಂ ಎಸ್ ಎಜ, ಮತ್ತು ಪಿ ಎಚ್ ಡಿ ಮಾಡಿಕೊಂಡಿರುವವರು ಬೇಕಾದಷ್ಟು ಜನ ಬರುತ್ತಿದ್ದಾರೆ. ಸಧ್ಯದಲ್ಲಿರತಕ್ಕವರಿಗೆ, ಫಾರ್ಮ್ ಟ್ರೈನಿಂಗ್ ಆದವರಿಗೆ ತಾಲ್ಲೂಕ್ ಲೆವೆಲ್ ಆಫೀಸನ್ನು ನಡೆಸಿಕೊಂಡು ಹೋಗುವುದು ಕಷ್ಟವಾಗುತ್ತದೆ. ಮಾನ ಸದಸ್ಯರು ಇವರು ಬಿಸಿಲಿನಲ್ಲಿ ಕೆಲಸ ಮಾಡುತ್ತಾರೆಂದು ಹೇಳಿದರು, ನಮ್ಮ ರೈತರೂ ಸಹ ಬಿಸಿಲಿನಲ್ಲಿಯೇ ಕೆಲಸ ಮಾಡತಕ್ಕವರು. ಇವರ ಸಂಬಳ ಸ್ವಲ್ಪ ಪರಿಶೀಲಿಸಬೇಕು ಎನ್ನುವುದನ್ನು ನಾವು ಪೇ ಕಮಿಟಿಯ ಮುಂದೆ ಇಡಬೇಕು ಎಂದು ಹೇಳಿದ್ದೇನೆ. ಎನ್ ಜಿ ಒ ಸಂಘದ ಅಧ್ಯಕ್ಷರಾದ ಶ್ರೀಮಾನ್ ಕೇಶವಮೂರ್ತಿಯವರು ಮತ್ತು ಸೆಕ್ರೆಟರಿಯವರಾದ ಶ್ರೀಮಾನ್ ರೇವಣಸಿದ್ಧಯ್ಯ ನವರು ಬಂದು ನನ್ನನ್ನು 25 ನೇ ತಾರೀಖು ಭೇಟಿ ಮಾಡಿದ್ದರು. ಭೇಟಿ ಮಾಡಿದಂಥ ಕಾಲದಲ್ಲಿ ನಾನು ಮಾನ್ಯ ಕೇಶವಮೂರ್ತಿಯವರಿಗೆ ಹೇಳಿದೆ, ಇದನ್ನು ನಾವು ಅಫಿಷಿಯಲ್ ಪೇ ಕಮಿಟಿಯ ಮುಂದೆ ಇಡುತ್ತೇವೆಂದು ಹೇಳಿದ್ದಕ್ಕೆ ಅವರು ಒಪ್ಪಿಕೊಂಡರು. ಇದರಲ್ಲಿ ಫೆನಾನ್ಸಿಯರ್ ಇಂಪ್ಲಿಕೇ

(ಶ್ರೀ ಎನ್. ಚಿಕ್ಕೇಗೌಡ)

ಷನ್ ಇರುತ್ತದೆ. ಸ್ಪೈಕ್ ಕಾಲ್ ಆಫ್ ಮಾಡಿ ಎಂದೂ ತಿಳಿಸಿದೆ, ಆದರೂ ಅವರು ಮಾಡುತ್ತಿದ್ದಾರೆ. ಅವರಿಗೆ ನ್ಯಾಯವಾಗಿ ಏನು ಕೊಡಬೇಕೋ ಅದನ್ನು ಕೊಡೋಣ. ಇವರ ಬೇಡಿಕೆಯನ್ನು ಕನ್ಸಿಡರ್ ಮಾಡುವುದಕ್ಕೆ ಆಗುವುದಿಲ್ಲ ಎಂದು ನಾನು ಹೇಳಲಿಲ್ಲ. ಇದನ್ನು ಪರಿಶೀಲಿಸಿ, ಹೇ ಕಮಿಟಿಯ ಮುಂದೆ ಕಳುಹಿಸೋಣ. ಹೇ ಕಮಿಟಿಯನ್ನು ಮಾಡುತ್ತೇವೆಂದು ಮಾನ್ಯ ಹಣಕಾಸಿನ ಸಚಿವರು ಘೋಷಿಸಿದ್ದಾರೆ. ಒಂದು ವ್ಯವಸ್ಥೆಯ ಮೇಲೆ, ಇವರಿಗೆ ಕೆಚ್ಚಿಗೆ ಹೇ ಮಾಡಬೇಕು ಎನ್ನುತಕ್ಕದ್ದನ್ನು ತೀರ್ಮಾನ ಮಾಡೋಣ ಎಂದು ಹೇಳಿದ್ದೇನೆ.

10-00 A. M.

ಸಂಬಂಧಪಟ್ಟವರು ಪಟ್ಟುಹಿಡಿದು ಸ್ಪೈಕ್ ಕಾಲ್ ಆಫ್ ಮಾಡಿ ಎಂದು ಅವರಿಗೆ ನಾನು ಈಸದನದ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ಇದು ದೇಶದ ಸಮಸ್ಯೆ, ರಾಷ್ಟ್ರದ ಸಮಸ್ಯೆ ಅವರು ಮಾಡುವ ಕೆಲಸ ಮಾಡಲಿ, ಪ್ರಜಾಪ್ರಭುತ್ವದ ಪ್ರಕಾರ, ಕಾನೂನು ಪ್ರಕಾರ ಅವರ ಬೇಡಿಕೆಯನ್ನು ಪರಿಶೀಲಿಸಿ ಸೂಕ್ತವಾದ ಕ್ರಮ ತೆಗೆದುಕೊಳ್ಳೋಣ ಮತ್ತು ಅವರಿಗೆ ಪರಿಹಾರ ಕೊಡೋಣ ಎಂದು ಸಭೆ ಮೂಲಕ ಹೇಳುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—"ಷಾರ್ಟ್" ಎಂದು ಹೇಳಿದ್ದೀರಿ ಯಾವಾಗ ಎಂದು ಖಚಿತವಾಗಿ ಹೇಳಿದರೆ ಆಗ ಹಂಗರ್‌ಸ್ಟ್ರೈಕ್ ನಿಲ್ಲಿಸುವುದಕ್ಕೆ ಆಗುತ್ತದೆ.

ಶ್ರೀ ಎನ್. ಚಿಕ್ಕೇಗೌಡ.—ನಮಿತಿಯ ಮುಂದೆ ಕಳುಹಿಸಿಕೊಟ್ಟಿದ್ದೇನೆ. ಅವರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ಅದನ್ನು ಅನುಸರಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

A QUESTION OF PIVILEGE

re ; the control of the Central CID by the State Government

ಶ್ರೀ ಎಸ್. ಬಂಗಾರಪ್ಪ (ಸೋರಬ).—ನಿನ್ನೆ ದಿವಸ ವಿರೋಧ ಪಕ್ಷದ ಅನೇಕ ಮಾನ್ಯ ಸದಸ್ಯರುಗಳು ಮಾನ್ಯ ಮಂತ್ರಿಗಳ ವಿರುದ್ಧವಾಗಿ ಸಹಿ ಮಾಡಿರತಕ್ಕ ಒಂದು ಹಕ್ಕು ಬಾಧ್ಯತಾ ನಿರ್ಣಯವನ್ನು ತಮ್ಮ ಹತ್ತಿರ ಕಳುಹಿಸಿಕೊಟ್ಟಿದ್ದೇವೆ.

ಅಧ್ಯಕ್ಷರು.— ನಿನ್ನೆ ದಿವಸ ಆದ ಒಪ್ಪಂದದ ಪ್ರಕಾರ ಅದು ಬರುವುದಿಲ್ಲ ಎಂದು ಊಹಿಸಿದ್ದೆ.

ಶ್ರೀ ಹೆಚ್. ಡಿ ದೇವೇಗೌಡ —ಅದು ಪ್ರಿವಿಲೇಜ್ ವಿಷಯ ಇದೆ. ಆದರೂ ತಿಳಿ ವಾತಾವರಣ ಉಂಟಾಗಿರುವುದರಿಂದ ಅದನ್ನು ಕೈ ಬಿಡಬಹುದು.

ಅಧ್ಯಕ್ಷರು.—ವಿಷಯ ಮುಗಿದು ಹೋದ ಮೇಲೆ ಅವರ ಬಗ್ಗೆ ಮಾತನಾಡುವುದು ಸರಿಯಲ್ಲ.

Sri S. M. KRISHNA.—Madam Speaker, I entirely agree with the leader of the Opposition.

ಶ್ರೀ ಎಸ್. ಬಂಗಾರಪ್ಪ.— ಪ್ರಾಮುಖ್ಯತೆ ಏನು ಎಂದು ವಿಷಯ ತಿಳಿಸುತ್ತೇನೆ.

ಅಧ್ಯಕ್ಷರು.—ಪ್ರಾಮುಖ್ಯತೆ ಅರ್ಥವಾಗುತ್ತದೆ. ವಾತಾವರಣ ತಿಳಿಯಾಗಿರುವುದರಿಂದ ಮತ್ತೆ ಅದನ್ನು ಕಲಕುವುದಕ್ಕೆ ಹೋಗಬೇಡಿ.

ಶ್ರೀ ಎಸ್. ಬಂಗಾರಪ್ಪ.—ಮೈ. ತಿಮ್ಮಪ್ಪನವರ ವಿಷಯವನ್ನು ಸೆಂಟ್ರಲ್ ಸಿ.ಐ.ಡಿ. ವಿಭಾಗಕ್ಕೆ ವಹಿಸಿ, ಅವರು ತನಿಖೆ ಮಾಡುತ್ತಾ ಇದ್ದಾರೆ, the State Government have no control over the Central C.I.D. ಎಂದು ಮುಂತಾಗಿ ಹೇಳಿದರು. It does not mean that the Central C.I.D. is controlled by the Central Government. The State Government is the controlling authority of the Central C.I.D.